**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,**

**ಶೋರಾಪೂರ**

**ಕ್ರಿ.ಮಿಸ್. ನಂ.94/2021**
**ಆರ್.ಡಬ್ಲ್ಯೂ : 1**

**ದಿನಾಂಕ: 16.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯವಿಚಾರಣೆ: ಅರ್ಜಿದಾರಳ ಪರ ಎ.ಹೆಚ್ ವಕೀಲರು ಏನು ಮುಂದುವರೆದ ಮುಖ್ಯವಿಚಾರಣೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

**ಪಾಟೀ ಸವಾಲು: ಎದುರುದಾರರ ಪರ ಡಿ.ಟಿ.ಬಿ ವಕೀಲರಿಂದ:**

ಅರ್ಜಿದಾರಳೊಂದಿಗೆ ಲಗ್ನವಾಗಿ 6 ವರ್ಷಗಳ ಮೇಲೆ ಆಗಿರುತ್ತದೆ. ಲಗ್ನವಾದ ನಂತರ ಅರ್ಜಿದಾರಳು ನಮ್ಮ ಮನೆಗೆ ಬಂದು ಒಂದು ವರ್ಷಗಳ ಕಾಲ ನನ್ನ ಜೊತೆ ಜೀವನ ಮಾಡಿರುತ್ತಾಳೆ. ಆ ಸಮಯದಲ್ಲಿ ಅರ್ಜಿದಾರಳು ಗರ್ಬವತಿ ಆಗಿದ್ದಳು ಎಂದರೆ ಸರಿಯಲ್ಲ. ನಾನು ಹೊಟ್ಟೆಗೆ ಒದ್ದಿದ್ದರಿಂದ ಗರ್ಭಪಾತವಾಗಿರುತ್ತದೆ ಎಂದರೆ ಸರಿಯಲ್ಲ. ಆ ನಂತರ 02 ತಿಂಗಳ ಕಾಲ ತವರು ಮನೆಗೆ ಹೋಗಿ ಮರಳಿ ನಮ್ಮ ಮನೆಗೆ ಬಂದಿರುತ್ತಾಳೆ ಎಂದರೆ ಸರಿಯಲ್ಲ. ನಮ್ಮಿಬ್ಬರ ದಾಂಪತ್ಯ ಜೀವನದಿಂದ ಒಬ್ಬ ಮಗಳು ಜನಿಸಿರುತ್ತಾಳ ಎಂದರೆ ಸರಿ. ನನ್ನ ಮಗಳ ಹೆಸರು ನನಗೆ ಗೊತ್ತಿರುವುದಿಲ್ಲ.ನನ್ನ ಮಗಳ ಹೆಸರು ಹುಲಗಮ್ಮ ಎಂದು ಇರುತ್ತದೆ ಎಂದರೆ ನಿಜ. ಸದರಿಯವಳು ನನ್ನ ಮೇಲೆ ಮತ್ತು ನನ್ನ ತಂದೆ-ತಾಯಿಯ ಮೇಲೆ ಪಾಲುವಿಭಾಗ ಕೋರಿ ಕಿರಿಯ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ನಿಜ. ಸದರಿ ಪ್ರಕರಣದಲ್ಲಿ ನಾವು ತಕರಾರನ್ನು ಸಲ್ಲಿಸಿದ್ದೇವೆ ಎಂದರೆ ನಿಜ.

2. ಸದರಿ ನನ್ನ ಮಗಳಾದ ಹುಲಗಮ್ಮ ಹುಟ್ಟಿದ ನಂತರ ನಾನು ಅರ್ಜಿದಾರಳಿಗೆ ನೀನು ಗಿಡ್ಡ ಇರುತ್ತೀಯಾ, ಅಡುಗೆ ಮಾಡಲು ಬರುವುದಿಲ್ಲ ಎಂದು ದಿನಾಲೂ ಕಿರುಕುಳ

ಕೊಡುತ್ತಿದ್ದೇನು ಎಂದರೆ ಸರಿಯಲ್ಲ. ನಾನು ನನ್ನ ಮಗಳು ಹುಟ್ಟಿದ ನಂತರ ಕುಡಿಯುವುದು, ಇಸ್ಪೇಟ ಆಡುವುದು, ಬೇರೆಲ್ಲ ಚಟ್ಟಗಳು ಮಾಡಲು ಪ್ರಾರಂಭಿಸಿದೆನು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯೊಂದಿಗೆ ಸೇರಿ, ನಾನು ದಿನಾಲೂ ಕುಡಿದು ಬಂದು ರೂ.5 ಲಕ್ಷ ರೂಪಾಯಿ ಹಣ ಮತ್ತು ಬಂಗಾರ ತೆಗೆದುಕೊಂಡು ಬಾ ಅಂತಾ ದಿನಾಲೂ ಕಿರುಕುಳ ಕೊಡುತ್ತಿದ್ದೇನು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯವರು ಬಡವರು ಇದುದ್ದರಿಂದ ಸದರಿ ಹಣವನ್ನು ಕೊಡುವ ಸಾಮರ್ಥ್ಯ ಇರುವುದಿಲ್ಲ ಎಂದು ಅರ್ಜಿದಾರಳು ಹೇಳಿದ್ದಳು ಎಂದರೆ ಸರಿಯಲ್ಲ. ನಾನು ಕಿರುಕುಳ ಕೊಟ್ಟು ದಿನಾಂಕ 11.05.2021 ರಂದು ರಾತ್ರಿ ಮನೆಯಿಂದ ಹೊರಹಾಕಿರುತ್ತೇವೆ ಎಂದರೆ ಸರಿಯಲ್ಲ. ಅದೇ ದಿನ ರಾತ್ರಿ ನಾವು ವರದಕ್ಷಿಣ ಕಿರುಕುಳ ಮಾಡಿರುತ್ತೇವೆ ಎಂದು ಕೆಂಭಾವಿ ಪೋಲೀಸ ಠಾಣೆಯಲ್ಲಿ ಅರ್ಜಿದಾರಳು ಪ್ರಕರಣ ದಾಖಲಿಸಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಇದೇ ನ್ಯಾಯಾಲಯದಲ್ಲಿ ನಾನು, ನನ್ನ ತಂದೆ-ತಾಯಿ ಜಾಮೀನು ಪಡೆದಿರುತ್ತೇವೆ ಎಂದರೆ ಸರಿ. ಈದಾದ ನಂತರ ತಳವಾರಗೇರಾ ಈರಮ್ಮ ಎನ್ನುವವಳನ್ನು ಎರಡನೇ ಮದುವೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿಯೂ ಸಹಿತ ನಾನು ಮತ್ತು ನನ್ನ ತಂದೆ ತಾಯಿ ಬೇಲ್ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಊರಿನ ಹಿರಿಯರು ಮತ್ತು ಅರ್ಜಿದಾರಳ ತಂದೆ ತಾಯಿ, ಅರ್ಜಿದಾರಳಿಗೆ ಹಣವನ್ನು ಹಂತ ಹಂತವಾಗಿ ಕೂಡುತ್ತೇವೆ ಅಂತಾ ಹೇಳಲು ಬಂದಾಗ ನಾನು ಸದರಿಯವರನ್ನು ಬೈದು ಕಳುಹಿರುತ್ತೇನೆ ಎಂದರೆ ಸರಿಯಲ್ಲ. ನಾನು ಬೈದ ನಂತರ ಸದರಿಯವರು ಬರಿ ಕೈಯಿಂದ ಮರಳಿ ಹೋಗಿರುತ್ತಾರೆ ಎಂದರೆ ಸರಿಯಲ್ಲ.

3. ನಮ್ಮ ಮನೆತನಕ್ಕೆ 5 ಎಕರೆ ಜಮೀನು ಇರುತ್ತದೆ. ಸದರಿ ಒಂದೇ ಜಮೀನು ಇರುತ್ತದೆ.

ನಮ್ಮ ಕುಟುಂಬಕ್ಕೆ ಒಟ್ಟು 3 ಹೊಲ ಸೇರಿ 8 ಎಕರೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. 2021 ರಿಂದ ಇಲ್ಲಿಯವರೆಗೂ ಅರ್ಜಿದಾರಳಿಗೆ ಅಥವಾ ನನ್ನ ಮಗಳಿಗೆ ಯಾವುದೇ ಜೀವನಾಂಶ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ವೃತ್ತಿಯಲ್ಲಿ ಚಾಲಕ ಇರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಜಮೀನು ನೀರಾವರಿ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಭತ್ತ ಬೆಳೆಯುತ್ತೇವೆ ಎಂದರೆ ಸರಿ. ಸದರಿ 08 ಎಕರೆ ಜಮೀನಿನಿಂದ ಪ್ರತಿ ಬೆಳೆಗೆ 400 ಚೀಲ ಭತ್ತವನ್ನು ಬೆಳೆಯುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 08 ಎಕರೆ ಇರುವುದಿಲ್ಲ, ಕ್ಷೇತ್ರ 05 ಎಕರೆ ಜಮೀನನಲ್ಲಿ 100 ಚೀಲ ಭತ್ತ ಬೆಳೆಯುತ್ತೇವೆ ಎಂದು ನುಡಿಯುತ್ತಾರೆ. ನಮಗೆ ವರ್ಷಕ್ಕೆ 10 ಲಕ್ಷ ರೂಪಾಯಿ ನಿವ್ವಳ ಆಧಾಯ ಇದೆ ಎಂದರೆ ಸರಿಯಲ್ಲ. ಅರ್ಜಿದಾರಳು ಮತ್ತು ನನ್ನ ಮಗಳಿಗೆ ಪ್ರತಿ ತಿಂಗಳು ರೂ.8 ಸಾವಿರ ಜೀವನಾಂಶ ಕೊಡಲು ಅರ್ಹತೆ ಇರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳ್ಚು ಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪೂರ.